**ಕರ್ನಾಟಕ ಸರ್ಕಾರ**

ಸಂಖ್ಯೆ: ಆಕುಕ 146 ಸಿಜಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:09.12.2020

**ಅಧಿಸೂಚನೆ**

ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ 2020 ರ ನಿಯಮ 4,5, ಹಾಗೂ 17 ರ ಅನ್ವಯ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ಸಾಂಕ್ರಾಮಿಕ ರೋಗಗಳ ವಿನಿಯಮಗಳು, 2020 ಕ್ಕೆ ಈ ಕೆಳಕಂಡಂತೆ ತಿದ್ದುಪಡಿಗಳನ್ನು ತರಲಾಗಿದೆ :-

**ವಿನಿಯಮಗಳು**

1. **ಶೀರ್ಷಿಕೆ ಮತ್ತು ಪ್ರಾರಂಭ:** (1) ಈ ನಿಬಂಧನೆಗಳನ್ನು ಕರ್ನಾಟಕ ಸಾಂಕ್ರಾಮಿಕ ರೋಗಗಳ (ಮೂರನೇ ತಿದ್ದುಪಡಿ), ವಿನಿಯಮ 2020 ಎಂದು ಕರೆಯಲಾಗುವುದು.

(2) ಈ ವಿನಿಯಮಗಳು ಕರ್ನಾಟಕ ರಾಜ್ಯದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ.

2. **2ನೇ ವಿನಿಯಮಕ್ಕೆ ತಿದ್ದುಪಡಿ:** ಕರ್ನಾಟಕ ಸರ್ಕಾರದ ಸಾಂಕ್ರಾಮಿಕ ರೋಗಗಳ ವಿನಿಯಮಗಳು 2020 (ಇನ್ನುಮುಂದೆ ವಿನಿಯಮಗಳು ಎಂದು ಕರೆಯಲಾಗುವುದು), ಉಪ ನಿಬಂಧನೆ (2)ರ, ಪರಂತುಕದಲ್ಲಿ ಖಂಡ (ಸಿ) ಗೆ ಈ ಕೆಳಗಿನವುಗಳನ್ನು ಪ್ರತಿಯೋಜಿಸತಕ್ಕದ್ದು, ಏನೆಂದರೆ :-

"(ಸಿ) ಎಲ್ಲ ಕಿಟಕಿಗಳನ್ನು ಮುಚ್ಚಿ ಒಬ್ಬರೇ ಕಾರನ್ನು ಚಾಲನೆ ಮಾಡುವಾಗ. ಆದಾಗ್ಯೂ, ಕಿಟಕಿಗಳನ್ನು ತೆರೆದಿರುವಾಗ ಮಾಸ್ಕ್ ಧರಿಸುವುದು ಕಡ್ಡಾಯವಾಗಿದೆ.

3. **3ನೇ ವಿನಿಯಮ** ಪ್ರತಿಯೋಜನೆ :- ಮೇಲೆ ತಿಳಿಸಿದ **ವಿನಿಯಮ** 3 ರಲ್ಲಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಏನೆಂದರೆ :-

"**3. ಸಾರ್ವಜನಿಕ ಸ್ಥಳಗಳಾದ ಹೋಟೇಲ್, ಸಿನೆಮಾ ಥಿಯೇಟರ್, ಮಾಲ್‌ಗಳು ಅಥವಾ ಅಂಗಡಿಗಳ ಮಾಲೀಕರು ಇತ್ಯಾದಿ-ನಿಯಮ 2ರ ಉಲ್ಲಂಘನೆ ಮಾಡಿದ ಪಕ್ಷದಲ್ಲಿ ದಂಡನೆ:** ಸಾರ್ವಜನಿಕ ಸ್ಥಳದ ಮಾಲೀಕರು ತಮ್ಮ ಆವರಣಗಳಲ್ಲಿ ನಿಬಂದನೆ (2) ರ ಉಪನಿಬಂಧನೆ (1) ಉಲ್ಲಂಘನೆಗೆ ಅವಕಾಶ ನೀಡಿದಲ್ಲಿ, ಈ ಕೆಳಕಂಡಂತೆ ದಂಡವನ್ನು ವಿಧಿಸಲಾಗುವುದು, ಏನೆಂದರೆ :-

(ಎ) ಹವಾ ನಿಯಂತ್ರಣ ವ್ಯವಸ್ಥೆ ಇಲ್ಲದ ಪಾರ್ಟಿ ಹಾಲ್‌ಗಳು, ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳು — ರೂ 5,000/-

(ಬಿ) ಹವಾ ನಿಯಂತ್ರಿತ ಪಾರ್ಟಿ ಹಾಲ್‌ಗಳು, ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳು, ಬ್ರಾಂಡೆಡ್ ಶಾಪ್‌ಗಳು (Single and multiple brands), ಶಾಪಿಂಗ್ ಮಾಲ್‌ಗಳು– ರೂ 10,000/-

(ಸಿ) ತ್ರಿಸ್ಟಾರ್ ಹಾಗೂ ಅದಕ್ಕಿಂತ ಮೇಲ್ಪಟ್ಟ ಸ್ಟಾರ್ ಹೋಟೇಲ್‌ಗಳು, ಕನಿಷ್ಠ 500 ಜನರು ಸೇರಲು ಅವಕಾಶವಿರುವ ಮದುವೆ ಅಥವಾ ಕನ್‌ವೆನ್ಷನ್ ಹಾಲ್‌ಗಳು ಹಾಗೂ ಇದೇ ರೀತಿಯ ಇತರ ಸಾರ್ವಜನಿಕ ಸ್ಥಳಗಳು – ರೂ 10,000/-

(ಡಿ) ಸಾರ್ವಜನಿಕ ಸಮಾರಂಭಗಳ ಆಯೋಜಕರು, ರ್‍ಯಾಲಿಗಳು, ಗುಂಪು ಸೇರುವಿಕೆ ಅಥವಾ ಆಚರಣೆಗಳು – 10,000/-

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಜಾವೇದ್ ಅಖ್ತರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ,
ಸಂಕಲನಕಾರರು, ಕರ್ನಾಟಕ ಗೆಜೆಟ್, ಬೆಂಗಳೂರು, ವಿಶೇಷ ಗೆಜೆಟ್ ನಲ್ಲಿ ತುರ್ತಾಗಿ ಪ್ರಕಟಿಸಲು

ಪ್ರತಿಯನ್ನು ಮಾಹಿತಿಗಾಗಿ, ಕ್ರೋಢೀಕರಿಸಲು ಹಾಗೂ ಪ್ರಸಾರಕ್ಕಾಗಿ,
ಆರೋಗ್ಯಸೌಧ, ಮಾಗಡಿ ರಸ್ತೆ,

1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
2. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು – ಆಯುಕ್ತಾಲಯದ ಮುಖಾಂತರ
3. ಆಯುಕ್ತರು / ವಿಶೇಷ ಆಯುಕ್ತರು, ಬಿ ಬಿ ಎಂಪಿ. ಹಡ್ಸನ್ ಸರ್ಕಲ್, ಬೆಂ.
4. ಎಲ್ಲಾ ಜಿಲ್ಲಾಧಿಕಾರಿಗಳು – ಆಯುಕ್ತಾಲಯದ ಮುಖಾಂತರ
5. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
7. ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು.
8. ಎಲ್ಲಾ ವಿಭಾಗೀಯ ಜಂಟಿ ನಿರ್ದೇಶಕರು / ಜಂಟಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ – ಆಯುಕ್ತಾಲಯದ ಮುಖಾಂತರ
9. ನಿರ್ದೇಶಕರು, ಆರ್ ಡಿ ಪಿ ಆರ್, ಬೆಂಗಳೂರು, ಎಲ್ಲಾ ಜಿಲ್ಲಾ ಪಂಚಾಯತ್ ಗಳಿಗೆ ಪ್ರಸಾರಕ್ಕಾಗಿ
10. ಮುಖ್ಯ ಆರೋಗ್ಯಾಧಿಕಾರಿಗಳು, ಬಿ ಬಿ ಎಂಪಿ
11. ಅಧ್ಯಕ್ಷರು, ಇಂಡಿಯನ್ ಮೆಡಿಕಲ್ ಅಸೋಷಿಯೆಷನ್ ಇವರ ಮಾಹಿತಿಗಾಗಿ ಹಾಗೂ ಎಲ್ಲಾ ಸದಸ್ಯರ ಮಾಹಿತಿಗಾಗಿ (12) ಎಲ್ಲಾ ಜಿಲ್ಲಾ ಆರೋಗ್ಯಾಧಿಕಾರಿಗಳು/ ಜಿಲ್ಲಾ ಸರ್ಜನರು/ ಆಡಳಿತ ಆರೋಗ್ಯಾಧಿಕಾರಿಗಳು ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳು/ ಎಲ್ಲಾ ಸಾರ್ವಜನಿಕ ಆಸ್ಪತ್ರೆಗಳ ವೈದ್ಯಕೀಯ ಅಧೀಕ್ಷಕರು. – ಆಯುಕ್ತಾಲಯದ ಮುಖಾಂತರ.